ಅಥಣಿ ತಾಲ್ಲೂಕಿನ 220 ಕೆ.ವಿ.ಎ ಸ್ಟೇಶನ್ ಮಂಜೂರಾತಿ ಕುರಿತು

1581 (1685) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ 220 ಕೆ.ವಿ ಸ್ಟೇಷನ್ ಮಂಜೂರಾತಿಯಾಗುವುದು ಯಾವಾಗ; ಈ ಕಾರ್ಯಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣ ಕಾಯ್ದಿರಿಸಲಾಗಿದೆ; ಅಥಣಿ 220 ಕೆ.ವಿ. ಸ್ಟೇಷನ್ ಯಾವಾಗ ಪ್ರಾರಂಭವಾಗುವುದು. ಸದರಿ ಕಾರ್ಯ ಯಾವಾಗ ಪೂರ್ಣಗೊಳ್ಳುವುದು;

ಆ) ಅಥಣಿ ತಾಲ್ಲೂಕಿನಲ್ಲಿ ಅತೀ ಹೆಚ್ಚಿನ ವಿದ್ಯುತ್ ಗ್ರಾಹಕರಿದ್ದು, ವಿದ್ಯುತ್ ಪಂಪ್‌ಸೆಟ್ಟುಗಳಿಗೆ ಹಾಗೂ ನೀರಾವರಿ ಯೋಜನೆಗಳಿಗೆ ಅತೀ ವಿದ್ಯುತ್ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಪೂರಕವಾಗಿ 220 ಕೆ.ವಿ.ಎ. ಸ್ಟೇಷನ್ ಮಂಜೂರು ಮಾಡುವ ಕುರಿತು ಪೂರ್ಣ ವಿವರ ನೀಡುವುದು;

ಇ) ಅಥಣಿ ತಾಲ್ಲೂಕಿನ ಐಗಳಿ 33 ಕೆ.ವಿ.ಎ. ಸ್ಟೇಷನ್ನಲ್ಲಿ ಎಷ್ಟು ಗ್ರಾಮಗಳು ಬರುತ್ತವೆ. ಸದರಿ ಸ್ಟೇಷನ್‌ನಲ್ಲಿ ವಿದ್ಯುತ್ ಪೂರೈಕೆ ಎಷ್ಟಿದೆ; ಇದನ್ನು 110 ಕೆ.ವಿ.ಎ ಸ್ಟೇಷನ್ ಆಗಿ ಪರಿವರ್ತಿಸುವ ಪ್ರಸ್ತಾವ ಸರ್ಕಾರಕ್ಕೆ ಇದೆಯೇ;

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ 220 ಕೆ.ವಿ. 2x100ಎಂ.ವಿ.ಎ ಸಾಮರ್ಥ್ಯದ ವಿತರಣಾ ಕೇಂದ್ರಕ್ಕೆ ತಾಂತ್ರಿಕ ಸಮಿತಿ ಮಂಜೂರಾತಿ ನೀಡಿದ್ದು, ಭೂ ಸ್ವಾಧೀನ ಕಾರ್ಯ ಪ್ರಕ್ರಿಯೆಯಲ್ಲಿದೆ. ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ, ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ಹಾಗೂ ಆರ್ಥಿಕ ವ್ಯವಸ್ಥೆಯನ್ನು ಮಾಡಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಬಂದಿದೆ. ಆದ್ದರಿಂದ 220 ಕೆ.ವಿ.ಎ ಸ್ಟೇಷನ್ ಸ್ಥಾಪಿಸಲು ತಾಂತ್ರಿಕ ಮಂಜೂರಾತಿ ನೀಡಲಾಗಿದೆ. ಮೇಲೆ ತಿಳಿಸಿದಂತೆ ಈ ಕಾಮಗಾರಿ ಪೂರ್ಣಗೊಳಿಸಲು ತ್ವರಿತ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಅಥಣಿ ತಾಲ್ಲೂಕಿನ ಐಗಳಿ 33:11 ಕೆ.ವಿ. ಉಪಕೇಂದ್ರದಿಂದ ಆದಲಗಟ್ಟಿ, ಕೊಹಳ್ಳಿ, ಶಿವಪುರ, ರಾಮತೀರ್ಥ, ಕನಹಾಳ, ಬನ್ನೂರ, ಹೊಳ್ಳಳ್ಳಿ, ಅರಟಾಳ, ಕೋಟಲಗಿ, ಬಡಗಿ ಮತ್ತು ಎಲಿಹಾದಲಗಿ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಈ ಉಪ ಕೇಂದ್ರದ ಸಾಮರ್ಥ್ಯ 2x5 ಎಂ.ವಿ.ಎ. ಈ ಉಪ ಕೇಂದ್ರವನ್ನು 110 ಕೆ.ವಿ.ಗೆ ಮೇಲ್ದರ್ಜೆಗೊಳಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಕಾರ್ಕಳದಲ್ಲಿರುವ ಆನೆಕೆರೆಯ ಸಂಪೂರ್ಣ ಅಭಿವೃದ್ಧಿ

1582 (1840) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳದಲ್ಲಿರುವ ಆನೆಕೆರೆ ಅತ್ಯಂತ ಪರಾತನ ಕೆರೆಯಾಗಿದ್ದು ಅದನ್ನು ಅಭಿವೃದ್ಧಿ ಪಡಿಸಲು ಈ ತನಕ ಭೌತಿಕ ಮತ್ತು ಆರ್ಥಿಕವಾಗಿ ಖರ್ಚು ಮಾಡಿದ ಹಣವೆಷ್ಟು; (ವಿವರ ಒದಗಿಸುವುದು)